**ಕರ್ನಾಟಕ ಸರ್ಕಾರ**

ಸಂಖ್ಯೆ:ಪಪೂಶಿಇ/ಶೈ-ಶಾ/ಮೂಸೌ/ಅ-ಬಿ/03/2014-15

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12,
ದಿನಾಂಕ: 04-02-2015.

**ಜ್ಞಾಪನ**

**ವಿಷಯ:** 2014-15ನೇ ಸಾಲಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಸರ್ಕಾರವು **ಗಿರಿಜನ ಉಪಯೋಜನೆ (ಟಿ.ಎಸ್.ಪಿ)** ಯೋಜನೆ ಅಡಿಯಲ್ಲಿ ಒದಗಿಸಿರುವ ಮೂರನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಇಡಿ 103 ಯೋಯೋಕ 2014, ದಿನಾಂಕ: 22-01-2015.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳಾದ ಪೀಠೋಪಕರಣ, ಪಾಠೋಪಕರಣ ಮತ್ತು ವಿಜ್ಞಾನ ವಿಭಾಗಕ್ಕೆ ಪ್ರಯೋಗಾಲಯ ಉಪಕರಣಗಳನ್ನು ಒದಗಿಸುವ ಸಲುವಾಗಿ 2014-15ನೇ ಸಾಲಿಗೆ **ಗಿರಿಜನ ಉಪಯೋಜನೆ (ಟಿ.ಎಸ್.ಪಿ) ಲೆಕ್ಕಶೀರ್ಷಿಕೆ "2202-02-109-0-06-423(ಯೋಜನೆ)"** ಅಡಿಯಲ್ಲಿ ರೂ. 49.00 ಲಕ್ಷಗಳ ಅನುದಾನವನ್ನು ಇಲಾಖೆಗೆ ಒದಗಿಸಲಾಗಿದೆ. ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಮೂರನೇ **ಕಂತಿನ ಅನುದಾನವಾಗಿ** ರೂ.12.25 ಲಕ್ಷಗಳನ್ನು ಸದರಿ ಉದ್ದೇಶಕ್ಕೆ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಂದ ಬಂದಿರುವ ಕೋರಿಕೆಗನುಗುಣವಾಗಿ ಉಲ್ಲೇಖಿತ ಆದೇಶದಲ್ಲಿ ಎರಡನೆಯ ಕಂತಾಗಿ ಬಿಡುಗಡೆ ಮಾಡಲಾಗಿರುವ ರೂ.12.25 ಲಕ್ಷಗಳ (ಹನ್ನೆರಡು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಪೀಠೋಪಕರಣಗಳ ಖರೀದಿಗಾಗಿ 12 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಪ್ರತಿ ಕಾಲೇಜಿಗೆ ರೂ.60,000/- ದಂತೆ ಮತ್ತು ಪ್ರಯೋಗಾಲಯ ವಿಜ್ಞಾನ ಉಪಕರಣಗಳ ಖರೀದಿಗಾಗಿ 11 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ರೂ.40,000/- ದಂತೆ ಹಾಗೂ ಒಂದು ಕಾಲೇಜಿಗೆ ರೂ.35,000/-ದಂತೆ ಮತ್ತು ಒಂದು ಕಾಲೇಜಿಗೆ ರೂ.30,000/-ದಂತೆ ಈ ಜ್ಞಾಪನಕ್ಕೆ ಅನುಬಂಧಿಸಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅವುಗಳ ಮುಂದೆ ತೋರಿಸುವಂತೆ **ಲೆಕ್ಕ ಶೀರ್ಷಿಕೆ "2202-02-109-0-06-423(ಯೋಜನೆ)"** ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ಅನುಬಂಧದಲ್ಲಿ ಸೂಚಿಸಲಾಗಿರುವ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಮಂಜೂರು ಮಾಡಲಾಗಿದೆ.

**ಷರತ್ತುಗಳು:**

1. ಪಾರದರ್ಶಕತೆ ನಿಯಮಾನುಸಾರ ರೂ.1,00,000-00 ಕ್ಕಿಂತ ಹೆಚ್ಚಿನ ಖರೀದಿಯನ್ನು ಟೆಂಡರ್ ಮೂಲಕ ಹಾಗೂ ರೂ. 1,00,000-00 ಕ್ಕಿಂತ ಕಡಿಮೆ ಮೊತ್ತದ ಖರೀದಿಯನ್ನು ಕೊಟೇಷನ್ ಪಡೆದು ನಿಯಮಾನುಸಾರ ಅತೀ ಕಡಿಮೆ ದರವನ್ನು ಸೂಚಿಸಿರುವ ಸರಬರಾಜುದಾರರ ಮೂಲಕ ಖರೀದಿಸತಕ್ಕದ್ದು.
2. ಖರೀದಿಯು Description and Specification ಗೆ ಅನುಗುಣವಾಗಿರುವುದೇ ಎಂಬ ಬಗ್ಗೆ ದೃಢೀಕರಣ ಪತ್ರ ನೀಡತಕ್ಕದ್ದು.
3. ಸಂಬಂಧಿಸಿದ ಸರಬರಾಜುದಾರರಿಂದ ಬಿಲ್ಲುಗಳನ್ನು ನಾಲ್ಕು ಪ್ರತಿಗಳಲ್ಲಿ ಪಡೆಯತಕ್ಕದ್ದು ಹಾಗೂ ಖರೀದಿಸಿದ ಸಾಮಾನುಗಳು ಉತ್ತಮ ಸ್ಥಿತಿಯಲ್ಲಿರುವ ಬಗ್ಗೆ ಹಾಗೂ ಸಂಬಂಧಿಸಿದ ದಾಸ್ತಾನು ಪುಸ್ತಕದಲ್ಲಿ ನಮೂದಿಸಿ ಪ್ರಾಂಶುಪಾಲರು ದೃಢೀಕರಿಸಿರಬೇಕು. ದಾಸ್ತಾನು ಪ್ರಮಾಣ ಪತ್ರ (Stock Certificate) ಗಳನ್ನು ಬಿಲ್ಲುಗಳ ಹಿಂಬದಿಯಲ್ಲಿ ದಾಖಲಿಸತಕ್ಕದ್ದು. ಮತ್ತು ಖರೀದಿಸಿದ ವಸ್ತುಗಳ ವಿವರವನ್ನು ತಪ್ಪದೇ ದಾಸ್ತಾನು ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು.

4. ಖರೀದಿಸಿದ ವಸ್ತುಗಳಿಗೆ ಒಂದೇ ಬಾರಿಗೆ ಡಿಸಿ ಬಿಲ್ಲನ್ನು ನಾಲ್ಕು ಪ್ರತಿಗಳಲ್ಲಿ ಪ್ರಾಂಶುಪಾಲರು ಸಿದ್ಧಪಡಿಸತಕ್ಕದ್ದು. ಡಿಸಿ ಬಿಲ್ಲಿನಲ್ಲಿ ಲೆಕ್ಕಶೀರ್ಷಿಕೆಯ ವಿವರಗಳನ್ನು ಸರಿಯಾಗಿ ನಮೂದಿಸಲಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು.
5. ಬಿಡುಗಡೆಯಾದ ಅನುದಾನವು ರೂ. 1 ಲಕ್ಷದ ಒಳಗೆ ಇದ್ದಲ್ಲಿ ಪ್ರಾಚಾರ್ಯರು ಕೊಟೇಷನ್ ಮುಖಾಂತರ ಖರೀದಿ ಪ್ರಕ್ರಿಯೆ ಪೂರೈಸುವುದು.

   ಅ) ಎಲ್ಲಾ ಖರೀದಿ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

   ಆ) ಸೀಲ್ಡ್ ಕೊಟೇಶನ್‌ಗಳನ್ನು 10 ದಿನದೊಳಗಾಗಿ ಆಹ್ವಾನಿಸುವುದು.

   ಇ) ಪ್ರಾಂಶುಪಾಲರು, ವಿಜ್ಞಾನ ಉಪಕರಣಗಳನ್ನು ಖರೀದಿಗೆ ಸಂಬಂಧಪಟ್ಟ ವಿಷಯದ ಉಪನ್ಯಾಸಕ ಹಾಗೂ ಒಬ್ಬ ಹಿರಿಯ ಉಪನ್ಯಾಸಕರು ಒಳಗೊಂಡಂತೆ ಸಮಿತಿಯ ಸೀಲ್ಡ್ ಕೊಟೇಶನ್‌ಗಳನ್ನು ಆಯ್ದ ದಿನಾಂಕದಂದು ದರ ಪಟ್ಟಿ ನೀಡಿದವರ ಸಮ್ಮುಖದಲ್ಲಿ ಸಹಿ ಹಾಗೂ ಮೊಹರನ್ನು ದಾಖಲಿಸಿ ತೆರೆಯುವುದು, ನಂತರ Comparitive statement ಗೆ ಸಹಿ ಹಾಕಿ ಕಾರ್ಯಾದೇಶ ಹೊರಡಿಸುವುದು.

   ಈ) ಸಾಮಗ್ರಿ ಖರೀದಿ ಮಾಡುವ ಮುನ್ನ ಅದರ ನಿರ್ಧಿಷ್ಟತೆಯನ್ನು (specification) ನಿಖರವಾಗಿ ನೀಡುವುದು. ಸಾಮಗ್ರಿಯು ನಿಮ್ಮ specification ಗೆ ನಿಖರವಾಗಿ ಇಲ್ಲದೆ ಇದ್ದ ಪಕ್ಷದಲ್ಲಿ ಮುಂದಿನ ಎರಡನೆಯ ಕಡಿಮೆ ದರದ ಕೊಟೇಶನ್‌ನನ್ನು ಆಯ್ಕೆ ಮಾಡಿ ಖರೀದಿಸುವುದು.

   ಯಾವುದೇ ಕಾರಣಕ್ಕೂ ಈ ಅನುದಾನವು Lapse ಆಗದಂತೆ ಬಳಸಿಕೊಳ್ಳಲು ಸೂಚಿಸಿದೆ. Lapse ಆದ ಪಕ್ಷದಲ್ಲಿ ಆಯಾ ಕಾಲೇಜುಗಳ ಪ್ರಾಂಶುಪಾಲರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು. ಈ ಆದೇಶ ತಲುಪಿದ ಕೂಡಲೆ ನಿಯಮಾನುಸಾರ ಖರೀದಿಸುವುದು. ಖರೀದಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಸೂಚನೆಗಳನ್ನು ನಿರ್ಲಕ್ಷಿಸಿದಲ್ಲಿ ಸಂಬಂಧಿಸಿದ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.
6. ಸಂಬಂಧಿಸಿದ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿ ಮಾಡುವುದು. ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಕಾಲೇಜುಗಳಿಗೆ ಸದರಿ ಆದೇಶದಲ್ಲಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತವನ್ನು ಸಂಪೂರ್ಣವಾಗಿ ದಿನಾಂಕ: 28-02-2015ರೊಳಗೆ ಬಳಕೆ ಮಾಡುವಂತೆ ನಿಗಾವಹಿಸಿ ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಯ ಜಂಟಿ ನಿರ್ದೇಶಕರು(ಮೂಲಭೂತ ಸೌಕರ್ಯ), ಇವರಿಗೆ ತಪ್ಪದೇ ಕಳುಹಿಸತಕ್ಕದ್ದು. ಸರ್ಕಾರದ ಕಾರ್ಯದರ್ಶಿಗಳ ಸಮ್ಮುಖದಲ್ಲಿ ನಡೆಯಲಿರುವ ಮಾಸಿಕ (MPIC) ವೆಚ್ಚದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಕ್ರೋಢೀಕೃತ ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಸಂಬಂಧಿಸಿದ ಉಪನಿರ್ದೇಶಕರು ತಮ್ಮ ಜಿಲ್ಲೆಯ ವೆಚ್ಚದ ವರದಿಯನ್ನು ಜಂಟಿ ನಿರ್ದೇಶಕರು (ಮೂಲಭೂತ ಸೌಕರ್ಯ) ಇವರಿಗೆ ಸಲ್ಲಿಸಲು ಮತ್ತೊಮ್ಮೆ ಸೂಚಿಸಿದೆ.
7. ಬಿಡುಗಡೆಯಾದ ಅನುದಾನದಲ್ಲಿ ಖರೀದಿಸಿದ ಪ್ರಾಯೋಗಿಕ ಉಪಕರಣಗಳ ಹೆಸರು, ಸಂಖ್ಯೆ, ತಗುಲಿದ ಒಟ್ಟು ವೆಚ್ಚದ ವಿವರಗಳನ್ನೊಳಗೊಂಡ ವರದಿಯನ್ನು ಇಲಾಖೆಯ ಜಂಟಿ ನಿರ್ದೇಶಕರು (ಮೂಲಭೂತ ಸೌಕರ್ಯ) ಇವರಿಗೆ ಕಳುಹಿಸತಕ್ಕದ್ದು, ಸರಬರಾಜಾದ ಉಪಕರಣ/ ಸಾಧನ ಪೀಠೋಪಕರಣಗಳ ಸಂಖ್ಯೆ ಅಥವಾ ಗುಣಮಟ್ಟದಲ್ಲಿ ಯಾವುದೇ ರೀತಿಯ ವ್ಯತ್ಯಾಸ ಕಂಡುಬಂಧಲ್ಲಿ ಈ ಸಂಬಂಧ್ಧ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.
8. ಪ್ರಯೋಗಶಾಲಾ ಉಪಕರಣಗಳನ್ನು ಖರೀದಿಸುವಾಗ ಸಂಬಂಧಿಸಿದ ಉಪನ್ಯಾಸಕರಿಂದ ಅವಶ್ಯಕತೆ ಇರುವ ವಸ್ತುಗಳ ಬೇಡಿಕೆ ಪಟ್ಟಿಯನ್ನು ಪಡೆದು ನಂತರ ಖರೀದಿಸುವುದು.
9. ವಿದ್ಯಾರ್ಥಿಗಳಿಗೆ ಪೀಠೋಪಕರಣ, ಪಾಠೋಪಕರಣ ಮತ್ತು ವಿಜ್ಞಾನ ವಿಭಾಗಕ್ಕೆ ಪ್ರಯೋಗಾಲಯ ಉಪಕರಣಗಳು ಮತ್ತು ಪ್ರಯೋಗಾಲಯದ ವಸ್ತುಗಳನ್ನು ಖರೀದಿಸುವಾಗ ಖರೀದಿಸುವ ವಸ್ತುಗಳ ಗುಣಮಟ್ಟ ಕಾಪಾಡಿಕೊಂಡು ಕನಿಷ್ಟ ದರವನ್ನು ಸೂಚಿಸಿರುವವರಿಂದ ಮಾತ್ರ ಖರೀದಿಸಲು ಕ್ರಮ ತೆಗೆದುಕೊಳ್ಳುವುದು.

***(ವಿಶೇಶ ಸೂಚನೆ: ಬಳಕೆ ಪ್ರಮಾಣ ಪತ್ರವನ್ನು ತಪ್ಪದೆ ಸಲ್ಲಿಸುವುದು)***

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ,

<u>ಪ್ರತಿಗಳು:</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸಂಬಂಧಿಸಿದ ಖಜಾನಾಧಿಕಾರಿಗಳಿಗೆ.
4. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ
6. ಆಯವ್ಯಯ/ಲೆಕ್ಕಸಮನ್ವಯ ಅಧೀಕ್ಷಕರು
7. ಸಂಬಂಧಿಸಿದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಜಿಲ್ಲಾ ಉಪನಿರ್ದೇಶಕರ ಮೂಲಕ.
8. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ,
9. ಕಛೇರಿ ಪ್ರತಿ.

GOVERNMENT OF KARNATAKA
DEPARTMENT OF PRE UNIVERSITY EDUCATION
GRANTS SANCTIONED FOR DESKS/FURNITURE & LAB EQUIPEMENTS
UNDER TSP SCHEME FOR GOVT PU COLLEGES DURING 2014-15
HEAD OF ACCOUNT 2202-02-109-0-06-423 (PLAN) III QUARTER
MEMO NO:PAPUSHIEE/SHY.SHA/MOO.SOU/A-B/02/2014-15

| SL. NO | NICODE | INAME | IADD1 | IADD2 | FUR. | SCI_LAB | TOTAL |
|---|---|---|---|---|---|---|---|
| 1 | DD222 | GOVT PU COLLEGE | SUREBAN-MANIHAL RAMDURG T | BELGAUM DIST | 60000 | | 60000 |
| 2 | EB113 | GOVT PU COLLEGE | DANNUR HUNGUND TQ | BAGALKOT DT 587118 | 60000 | | 60000 |
| 3 | EB130 | GOVT PU COLLEGE FOR GIRLS | GULEDGUDDA BADAMI TQ | BAGALKOT DT 587203 | | 40000 | 40000 |
| 4 | GD230 | GOVT PU COLLEGE FOR GIRLS | NYAMATHI HONNALI TQ | DAVANGERE DT 577223 | | 40000 | 40000 |
| 5 | GG159 | GOVT PU COLLEGE | TIMMANNANAYAKANAKOTE | CHALLAKERE TQ 577538 | | 40000 | 40000 |
| 6 | JG159 | GOVT PU COLLEGE | BANAHATTI NARGUND TQ | GADAG DT 582207 | | 40000 | 40000 |
| 7 | JH286 | GOVT PU COLLEGE | GUTTALA HAVERI TQ | HAVERI DIST | 60000 | | 60000 |
| 8 | JJ289 | GOVT PU COLLEGE | KARADIGUDDA DHARWAD TQ | DHARWAD DIST | 60000 | | 60000 |
| 9 | JJ316 | GOVT PU COLLEGE | INSIDE RN SHETTY STADIUM | DHARWAD | | 40000 | 40000 |
| 10 | JJ272 | GOVT PU COLLEGE | BAMMIGATTE KALGHATAGI TQ | DHARWAD DIST | 60000 | | 60000 |
| 11 | NN043 | GOVT MAHARANI PU COLLEGE | NARAYANA SASTRI ROAD | MYSORE 570024 | 60000 | | 60000 |
| 12 | NN216 | GOVT PU COLLEGE | GAVADAGERE HUNSUR TQ | MYSORE DT | | 40000 | 40000 |
| 13 | RK023 | GOVT PU COLLEGE | HANAMASAGAR KUSHTAGI TQ | KOPPAL DT 584114 | | 40000 | 40000 |
| 14 | RK025 | GOVT PU COLLEGE FOR GIRLS | KOPPAL | 583231 | | 40000 | 40000 |
| 15 | RK048 | GOVT PU COLLEGE | MANGALORE YELBURGA TQ | KOPPAL DT 583237 | | 40000 | 40000 |
| 16 | RK066 | GOVT PU COLLEGE FOR BOYS | BHAGYANAGAR | KOPPAL TQ 583231 | | 40000 | 40000 |
| 17 | RK155 | GOVT PU COLLEGE | HIRE SINDOGI | KOPPAL DIST | | 40000 | 40000 |
| 18 | RK169 | GOVT PU COLLEGE | HALAGERI KOPPAL TQ | KOPPAL DIST | 60000 | | 60000 |
| 19 | RR159 | GOVT PU COLLEGE | MATAMARI | RAICHUR DIST | 60000 | | 60000 |
| 20 | RR190 | GOVT PU COLLEGE | KAIRAVADAGI LINGASUGUR TQ | RAICHUR DT | 60000 | | 60000 |
| 21 | SS044 | GOVT PU COLLEGE | PUTTUR | DK DT 574201 | 60000 | | 60000 |
| 22 | SU040 | GOVT PU COLLEGE | BYNDOOR KUNDAPURA TQ | UDUPI DT 576214 | 60000 | | 60000 |
| 23 | SU129 | GOVT PU COLLEGE | HOSANGADI KUNDAPURA TQ | UDUPI DT 576282 | | 35000 | 35000 |
| 24 | TT048 | GOVT PU COLLEGE | BASAVANI THIRTHAHALLI TQ | SHIMOGA DT 577432 | 60000 | | 60000 |
| 25 | UU129 | GOVT PU COLLEGE | THIRUMANI PAVAGADA TQ | TUMKUR DT 572136 | | 30000 | 30000 |
| | | | | TOTAL | 720000 | 505000 | 1225000 |

Sd/-
DIRECTOR,
Dept.of Pre-University Edn.